**<u>ಸಾಕ್ಷಿಯನ್ನು ದಿನಾಂಕ 24-02-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಬಿ ವಕೀಲರಿಂದಃ</u>**

1. ಈ ದಾವೆಯನ್ನು ಯಾವ ಉದ್ದೇಶಕ್ಕೆ ದಾಖಲಿಸಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ 7 ಗುಂಟೆ ಜಮೀನನ್ನು ಪ್ರತಿವಾದಿ ಒತ್ತುವರಿಯಾದ ಕಾರಣ ದಾಖಲಿಸಿದ್ದೇನೆ ಎನ್ನುತ್ತಾರೆ. ಪ್ರತಿವಾದಿ ನನ್ನ ಜಮೀನಿನ ಉತ್ತರ ದಿಕ್ಕಿಗೆ ಜಮೀನು ಹೊಂದಿದ್ದಾರೆ. ಅವರು ನನ್ನ ಜಮೀನು ಒತ್ತುವರಿ ಮಾಡಿದ್ದಾರೆ ಎಂದು ಸರ್ವೆಯವರ ಮೂಲಕ ನನಗೆ ಗೊತ್ತಾಯಿತು. ಆ ಸಂಬಂಧ ಸರ್ವೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಪ್ರತಿವಾದಿಯೇ ದಾವಾ ಸ್ವತ್ತನ್ನು ಒತ್ತುವರಿ ಮಾಡಿದ್ದಾರೆ ಎಂದು ತೋರಿಸಲು ಬೇರೆ ಯಾವ ದಾಖಲೆ ಕೊಟ್ಟಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಎ.ಡಿ.ಎಲ್.ಆರ್ ರವರ ಮುಂದೆ ನಡೆದಿರುವ ಪ್ರಕರಣದ ದಾಖಲೆ ಕೊಟ್ಟಿದ್ದೇನೆ ಎನ್ನುತ್ತಾರೆ. ಬೇರೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿ.

2. ದಾವಾ ಸ್ವತ್ತು ಡಿ ಬಿ ಹಳ್ಳಿ ಗ್ರಾಮದಲ್ಲಿದೆ. ಅದರ ಸರ್ವೆ ನಂಬರ್ 20/10. ಸದರಿ ಸರ್ವೆ ನಂಬರ್ ನಲ್ಲಿ ನಿಮಗೆ ಎಷ್ಟು ಜಮೀನು ಇದೆ ಎಂಬ ಪ್ರಶ್ನೆಗೆ ಸಾಕ್ಷಿ 2 ಎಕರೆ 16 ಗುಂಟೆ ಇತ್ತು ಮತ್ತು ಆ ಪೈಕಿ 2 ಎಕರೆ ಮಾರಾಟ ಮಾಡಿ 16 ಗುಂಟೆ ಉಳಿಸಿಕೊಂಡಿದ್ದೇವೆ ಎನ್ನುತ್ತಾರೆ. ವಾದ ಪತ್ರದಲ್ಲಿ ನಮೂದಿಸಿರುವ ಚಕ್ಕುಬಂಧಿಗೆ ಒಳಪಟ್ಟು 16 ಗುಂಟೆ ಆಸ್ತಿ ಇದೆ ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ. ಸಾಕ್ಷಿ ಪುನಃ ಪಹಣಿ ಮಾತ್ರ ಕೊಟ್ಟಿದ್ದೇನೆ ಎನ್ನುತ್ತಾರೆ. 16 ಗುಂಟೆ ಆಸ್ತಿಯ ಚಕ್ಕುಬಂಧಿಯನ್ನು ನಿರ್ಧರಿಸುವ ಯಾವುದೇ ದಾಖಲೆ ಕೊಡದ ಕಾರಣ

ಈ ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ವಾದಿ ಅರ್ಹಳಲ್ಲ ಎಂದರೆ ಸರಿಯಲ್ಲ.

3. ಮಾರಾಟ ಮಾಡಿದ ನಂತರ ನಮ್ಮ ಬಳಿ ಉಳಿದುಕೊಂಡಿದ್ದೆ ಎನ್ನಲಾದ 16 ಗುಂಟೆ ಜಮೀನು ಅಥವಾ ಪ್ರತಿವಾದಿ ಒತ್ತುವರಿ ಮಾಡಿದ್ದಾರೆ ಎನ್ನಲಾದ 7 ಗುಂಟೆ ಜಮೀನಿನ ಪ್ರತ್ಯೇಕ ಚಕ್ಕುಬಂಧಿ ಬರೆಸಿಲ್ಲ ಎಂದರೆ ಸಾಕ್ಷಿ 16 ಗುಂಟೆ ಚಕ್ಕುಬಂಧಿಗೆ ಒಳಪಟ್ಟ ಜಮೀನಿನಲ್ಲೇ ಒತ್ತುವರಿಯಾಗಿದೆ ಎನ್ನುತ್ತಾರೆ. ಒತ್ತುವರಿಯಾಗಿದೆ ಎನ್ನಲಾದ 7 ಗುಂಟೆ ಜಮೀನಿಗೆ ಪ್ರತ್ಯೇಕ ಚಕ್ಕುಬಂಧಿ ಕೊಟ್ಟಿಲ್ಲ ಎಂದರೆ ಸರಿ. ಕಳೆದ 40–50 ವರ್ಷಗಳಿಂದ ಸರ್ವೆ ನಂಬರ್ 20/10 ರಲ್ಲಿರುವ 16 ಗುಂಟೆ ಜಮೀನಿನಲ್ಲಿ ನಾವು ಸ್ವಾಧೀನವಿಲ್ಲ ಎಂದರೆ ಸರಿಯಲ್ಲ. ನಾವು ಸ್ವಾಧೀನವೇ ಇಲ್ಲದಿರುವ ಜಮೀನನ್ನು ಪ್ರತಿವಾದಿ ಒತ್ತುವರಿ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಮಗೆ ಸೇರಿದ ಯಾವುದೇ ಜಮೀನು ಸರ್ವೆ ನಂಬರ್ 20 ರಲ್ಲಿ ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ.

4. ಸರ್ವೆ ನಂಬರ್ 20 ರಲ್ಲಿ ಸುಮಾರು 11 ಎಕರೆ ಜಮೀನು ಇದೆ. ಸದರಿ ಸರ್ವೆ ನಂಬರ್ ನಲ್ಲಿ 15–16 ಪೋಡಗಳಿವೆ. ತತ್ಕಾಲ್ ಪೋಡು ವರದಿ ಬಂದ ನಂತರ ನಾವು ಎ.ಡಿ.ಎಲ್.ಆರ್ ರವರ ಮುಂದೆ ವ್ಯಾಜ್ಯ ದಾಖಲಿಸಿದ್ದೆವು ಎಂದರೆ ಸರಿ. ಸದರಿ ವ್ಯಾಜ್ಯ ಏನಾಯಿತು ಎಂಬ ಪ್ರಶ್ನೆಗೆ ಸಾಕ್ಷಿ ನಾವು ಪ್ರತಿ ತಿಂಗಳು ಹೋಗುತ್ತಿದ್ದೇವೆ ಆದರೆ ಪ್ರತಿವಾದಿ ಬರುತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ ಬರುತ್ತಿಲ್ಲದ ಕಾರಣ ನ್ಯಾಯಾಲಯಕ್ಕೆ ಹೋಗುವಂತೆ ಎ.ಡಿ.ಎಲ್.ಆರ್ ರವರು ಹೇಳಿದ್ದಾರೆ. ಎ.ಡಿ.ಎಲ್.ಆರ್ ರವರು ಕೊಟ್ಟಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ.

5. ಪ್ರತಿವಾದಿ ನಮಗೆ ಸೇರಿದ ದಾವಾ ಸ್ವತ್ತನ್ನು ಒತ್ತುವರಿ ಮಾಡಿದ್ದಾರೆ ಎಂದು ತೋರಿಸುವ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಆಸ್ತಿಯನ್ನು ನಿಖರವಾಗಿ ಇಂತಹ ವ್ಯಕ್ತಿಯೇ ಒತ್ತುವರಿ ಮಾಡಿದ್ದಾರೆ ಎಂದು ಸರ್ವೆಯವರು ವರದಿ ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಸ್ವ ಇಚ್ಛೆಯಿಂದ ಸರ್ವೆಯವರು ಅಳತೆ ಮಾಡುವ ಕಾಲಕ್ಕೆ ನಮ್ಮ ಜಮೀನು ಎಲ್ಲಿ ಬರುತ್ತದೆ ಎಂಬುವುದನ್ನು ತೋರಿಸಿದ್ದಾರೆ ಎನ್ನುತ್ತಾರೆ. ಸರ್ವೆಯವರು ಬಾಯಿ ಮಾತಿನಲ್ಲಿ ಹೇಳಿದ ನಂತರ ನಮ್ಮ ಜಮೀನು ಒತ್ತುವರಿಯಾಗಿದೆ ಎಂದು ನಮಗೆ ಗೊತ್ತಾಯಿತು ಎಂದರೆ ಸರಿ. ತನ್ನ ಬಳಿ ಇರುವ ಹೆಚ್ಚುವರಿ 7 ಗುಂಟೆ ಜಮೀನನ್ನು ಬಿಟ್ಟು ಕೊಡುತ್ತೇನೆ ಎಂದು ಪ್ರತಿವಾದಿ ಹೇಳಿದ್ದರು ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

6. ಎ.ಡಿ.ಎಲ್.ಆರ್ ರವರು ಪ್ರತಿವಾದಿಗೆ ಕೊಟ್ಟಿರುವ ನೋಟಿಸಿನಲ್ಲಿ ಸರ್ವೆ ನಂಬರ್ 20/10 ರಲ್ಲಿ ವಾದಿ ಸ್ವಾಧೀನದಲ್ಲಿಲ್ಲ ಎಂದು ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳತ್ತೇವೆ ಎಂದು ಎ.ಡಿ.ಎಲ್.ಆರ್ ರವರ ಮುಂದೆ ವಾದಿಯೇ ಹೇಳಿಕೆ ಕೊಟ್ಟಿದ್ದಾರೆ, ಎ.ಡಿ.ಎಲ್.ಆರ್ ರವರು ನ್ಯಾಯಾಲಯಕ್ಕೆ ಹೋಗುವಂತೆ ಆಕೆಗೆ ಹೇಳಿಲ್ಲ ಎಂದರೆ ಸರಿಯಲ್ಲ. ವಾದಿ ಹೇಳಿಕೆ ಆಧಾರದ ಮೇಲೆ ತತ್ಕಾಲ್ ಪೋಡ್ ಅರ್ಜಿಯನ್ನು ವಿಲೇವಾರಿಗೆ ಬಾಕಿ ಇಟ್ಟಿದ್ದಾರೆ ಎಂದರೆ ಸರಿಯಲ್ಲ. ಹದ್ದು ಬಸ್ತು ಅಳತೆ ಆಗದೆ ಇರುವ ಕಾರಣ ಪ್ರತಿವಾದಿ ವಿರುದ್ಧ ಯಾವುದೇ ಪರಿಹಾರ ಪಡೆಯಲು ವಾದಿ

ಅರ್ಹಳಲ್ಲ ಎಂದರೆ ಸರಿಯಲ್ಲ. ನಮ್ಮ ಅರ್ಜಿಯನ್ನು ವಿಲೇವಾರಿಗೆ ಬಾಕಿ ಇಟ್ಟು ಎ.ಡಿ.ಎಲ್.ಆರ್ ರವರು ಮಾಡಿದ ಆದೇಶದ ವಿರುದ್ಧ ನಾವು ಮೇಲ್ಮನವಿ ಸಲ್ಲಿಸಿಲ್ಲ.

7. ಸತ್ಯಾಂಶ ಮರೆಮಾಚಿ ಪ್ರತಿವಾದಿಗೆ ನೋಟಿಸು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ ಸದರಿ ನೋಟಿಸಿಗೆ ಉತ್ತರ ಕೊಟ್ಟಿದ್ದಾರೆ ಎಂದರೆ ಸರಿ. ಪ್ರತಿವಾದಿ ಸರ್ವೆ ನಂಬರ್ 20 ರಲ್ಲಿ 5 ಗುಂಟೆ ಖರಾಬು ಹೊರತುಪಡಿಸಿ 1 ಎಕರೆ ಜಮೀನನ್ನು ಹೊಂದಿದ್ದು, ಸದರಿ 1 ಎಕರೆಗೆ ಅವರೇ ಮಾಲಿಕರು ಎಂದರೆ ಸಾಕ್ಷಿ ನಮ್ಮ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಎ.ಡಿ.ಎಲ್.ಆರ್ ರವರ ವರದಿ ಪ್ರಕಾರವೇ ಸರ್ವೆ ನಂಬರ್ 20 ರಲ್ಲಿ ನಾವು ಯಾವುದೇ ಜಮೀನು ಹೊಂದಿಲ್ಲ ಎಂದರೆ ಸರಿಯಲ್ಲ. ಹದ್ದು ಬಸ್ತು ಅಳತೆ ಮಾಡಿಸಿದರೆ ಮಾತ್ರ ಒತ್ತುವರಿ ಮಾಡಿರುವ ವಿಷಯ ಗೊತ್ತಾಗುತ್ತದೆ ಎಂದರೆ ಸರಿ. ಯಾವುದೇ ನಿಖರತೆ ಇಲ್ಲದೆ ಪ್ರತಿವಾದಿ ನಮ್ಮ ಜಮೀನು ಒತ್ತುವರಿ ಮಾಡಿದ್ದಾರೆ ಎಂದು ಸುಳ್ಳು ದಾವೆ ಹಾಕಲಾಗಿದೆ ಎಂದರೆ ಸರಿಯಲ್ಲ.

8. ಪಹಣಿಯಂತೆ ಸನ.20 ರಲ್ಲಿ14 ಎಕರೆ 38 ಗುಂಟೆ ಜಮೀನು ಇದೆ ಮತ್ತು ಆ ಪೈಕಿ 37 ಗುಂಟೆ ಖರಾಬು ಇದೆ ಎನ್ನುವುದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 20/1 ರಿಂದ 20/15 ರವರೆಗೆ ಪಹಣಿ ಇದೆ ಎಂದರೆ ಸರಿ. ಆ ಪೈಕಿ ಸನ.20/1 ಎಂಬ ಎರಡು ಪೋಡಿಗಳಿವೆ ಎನ್ನುವುದು ನನಗೆ ಗೊತ್ತಿಲ್ಲ. 2 ನೇ ಬಾರಿ ಸರ್ವೆ ಮಾಡಿದಾಗ ಸರ್ವೆ ನಂಬರ್ 20 ರಲ್ಲಿ 11 ಎಕರೆ 2 ಗುಂಟೆ ಜಮೀನು ಇದೆ ಎಂದು ತೋರಿಸಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ನಾನೇ ಹಾಜರುಪಡಿಸಿದ ನಿ.ಪಿ.–5 ರ ಆಕಾರ್ ಬಂದಿನಂತೆ ಸರ್ವೆ ನಂಬರ್ 20

ರಲ್ಲಿ 9 ಎಕರೆ 16 ಗುಂಟೆ ಆಸ್ತಿ ಇದೆ ಎಂದು ತೋರಿಸಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಪಹಣಿ ಮತ್ತು ಆಕಾರ್ ಬಂದ್ ದಾಖಲೆಗಳಲ್ಲಿ ಸರ್ವೆ ನಂಬರ್ 20 ರ ಜಮೀನಿನ ವಿಸ್ತೀರ್ಣ ತಾಳೆಯಾಗುವುದಿಲ್ಲ ಎಂಬ ವಿಚಾರ ಗೊತ್ತಿದ್ದರೂ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಂದಾಯ ದಾಖಲೆಗಳು ಮತ್ತು ಸರ್ವೆ ದಾಖಲೆಗಳ ನಡುವೆ ತಾಳೆ ಇರದ ಕಾರಣ ಯಾರ ಜಮೀನನ್ನು ಯಾರು ಒತ್ತುವರಿ ಮಾಡಿದ್ದಾರೆ ಎನ್ನುವುದು ಸಾಬೀತಾಗುವುದಿಲ್ಲ ಎಂದರೆ ಸರಿ.

9. ಪ್ರತಿವಾದಿಯ ಜಮೀನು ನಮ್ಮ ಜಮೀನಿನ ಚಕ್ಕುಬಂಧಿಯ ಒಳಗೆ ಬರುತ್ತದೆ ಎಂದು ವಾದ ಪತ್ರದ ಪ್ಯಾರಾ ನಂಬರ್ 2 ರಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿರುವುದರಿಂದ ವಾದಿ ಯಾವುದೇ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**